ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಸೋಮವಾರ, ದಿನಾಂಕ : 07 ನೇ ಡಿಸೆಂಬರ್, 2020

ಕಡ್ಡಾಯವಾಗಿ ಕೋವಿಡ್-19 ರಜೆಯಲ್ಲಿರುವ ಮಕ್ಕಳ ಮನೋಬಲ ಅಧ್ಯಯನ ಕುರಿತು

ಡಾ|| ತೇಜಸ್ವಿನಿಗೌಡ(ವಿಧಾನಸಭೆಯಿಂದ ಚುನಾಯಿತರಾದವರು) -

75 (169) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಕೋವಿಡ್-19 ಹಿನ್ನಲೆಯಲ್ಲಿ ಕಡ್ಡಾಯವಾಗಿ ಮುಚ್ಚಲ್ಪಟ್ಟಿರುವ ಶಾಲೆಯಿಂದಾಗಿ ಮನೆಯಲ್ಲಿಯೇ ಇರುವ ಮಕ್ಕಳ ಪೋಷಕರ ಮನೋಬಲ ವೃದ್ಧಿಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

(ಆ) ಪ್ರಸ್ತುತ ಡಿಸೆಂಬರ್ ಹಾಗೂ ಜನವರಿ ತಿಂಗಳುಗಳು ಅತ್ಯಂತ ಶೀತದಾಯಕವಾಗಿದ್ದು, ಕೋವಿಡ್-19ರ 2ನೇ ಅಲೆಯು ವೇಗವಾಗಿ ಮಾರಾಣಾಂತಿಕವಾಗಿ ವ್ಯಾಪ್ತಿಸುತ್ತಿರುವ ಹಿನ್ನಲೆಯಲ್ಲಿ ವಿದ್ಯಾರ್ಥಿಗಳ ಭವಿಷ್ಯದ ಕುರಿತು ಸರ್ಕಾರ ಕೈಗೊಂಡಿರುವ ನಿರ್ಣಯಗಳೇನು;

(ಇ) ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ 1 ರಿಂದ 9 ತರಗತಿವರೆಗೆ ಉತ್ತೀರ್ಣ ಮಾಡಿ ಶೈಕ್ಷಣಿಕ ಉನ್ನತೀಕರಣ ಸೂಕ್ತವೆನಿಸಿದ್ದರೂ ಎಸ್. ಎಸ್. ಎಲ್. ಸಿ ಹಾಗೂ ಪಿ. ಯು. ಸಿ ಪರೀಕ್ಷೆಗಳಿಗೆ ಕಡ್ಡಾಯವಾಗಿ ತರಬೇತಿ ಹಾಗೂ ಪರೀಕ್ಷೆ ಸೂಕ್ತವಾಗಿದ್ದು ಈ ಬಗ್ಗೆ ಸರ್ಕಾರದ ನಿಲುವೇನು?